

ಎಐ ಚಿತ್ರ

# ಯೂನಿಸ್ ಫೂಟ್

## ಬಿಸಿ ಭೂಮಿಯ ಭವಿಷ್ಯ ನುಡಿದಿದ್ದ ವಿಜ್ಞಾನಿ

**ಮಹಿಳೆಯರ ಸಾಧನೆಗಳನ್ನು ಅಲಕ್ಷಿಸುತ್ತಿದ್ದ ಕಾಲದಲ್ಲಿ, ವಿಜ್ಞಾನಲೋಕದ ಅನುಮೋದನೆ–ಶ್ಲಾಘನೆ ದೊರೆಯದಿದ್ದರೂ ಸಂಶೋಧನೆಗಳಲ್ಲಿ ತೊಡಗಿ ಹಲವು ಆವಿಷ್ಕಾರ ಮಾಡಿದವರು ಯೂನಿಸ್‌. ನೂರು ವರ್ಷಗಳ ನಂತರವಷ್ಟೇ ಜಗತ್ತಿಗೆ ಅವರ ಸಂಶೋಧನೆಗಳ ಮಹತ್ವ ಅರಿವಾದದ್ದು.**

■ ಸರೋಜಾ ಪ್ರಕಾಶ

ಭೂಮಿಯ ತಾಪಮಾನ ಏರುತ್ತಿದೆ ಎಂಬ ಸಂಗತಿ ಈಗ ಬಹುತೇಕ ಎಲ್ಲರಿಗೂ ಗೊತ್ತಿದೆ. ಪೆಟ್ರೋಲ್, ಡೀಸೆಲ್, ಕಲ್ಲಿದ್ದಲನ್ನು ಉರಿಸುತ್ತ, ಇಂಗಾಲದ ಡೈ ಆಕ್ಸೈಡನ್ನು ವಾಯುಮಂಡಲಕ್ಕೆ ಸೇರಿಸುತ್ತಿರುವುದೇ ತಾಪಮಾನ ಏರಿಕೆಗೆ ಕಾರಣ ಎಂಬುದನ್ನು ಹೈಸ್ಕೂಲ್ ಮಕ್ಕಳೂ ಅರಿತಿದ್ದಾರೆ. ಆದರೆ ಹೀಗಾಗುತ್ತಿದೆ ಎಂಬುದನ್ನು ಇಡೀ ಜಗತ್ತಿಗೆ ಮೊಟ್ಟ ಮೊದಲು ತೋರಿಸಿದ್ದು ಒಬ್ಬ ಮಹಿಳಾ ವಿಜ್ಞಾನಿ.

ಅಮೆರಿಕದಲ್ಲಿ 1819ರಲ್ಲಿ ಜನಿಸಿದ ಯೂನಿಸ್ ಎಂಬ ಮಹಿಳೆಯ ಕಥೆ ಇದು.

ಭೂಮಿಗೆ ಗುರುತ್ವಾಕರ್ಷಣ ಶಕ್ತಿ ಇದೆ ಎಂಬುದನ್ನು ತೋರಿಸಿಕೊಟ್ಟ ಬ್ರಿಟಿಷ್ ವಿಜ್ಞಾನಿ ಸರ್ ಐಸಾಕ್ ನ್ಯೂಟನ್ ಕುರಿತು ಗೊತ್ತಿದೆ. ಯೂನಿಸ್‌ಳ ಅಪ್ಪ ಕೂಡ ಐಸಾಕ್ ನ್ಯೂಟನ್ ಹೆಸರಿನವರೇ ಆಗಿದ್ದರು. ಅವರು ವಿಜ್ಞಾನಿ ಆಗಿರಲಿಲ್ಲ. ಅಮೆರಿಕದ ಕನೆಕ್ಟಿಕಟ್ ಎಂಬ ಪ್ರಾಂತ್ಯದಲ್ಲಿ ದನಗಳ ವ್ಯಾಪಾರ, ಭೂಮಿಕಾಣಿ ಲೇವಾದೇವಿ ಮಾಡುತ್ತ, ಹಣ ಗಳಿಸುತ್ತ, ಅಷ್ಟೇ ಸಲೀಸಾಗಿ ಬೆಟ್ಟಿಂಗ್ ದಂಧೆಯಲ್ಲಿ ಹಣ ಕಳೆಯುತ್ತ ಬದುಕು ಸಾಗಿಸುತ್ತಿದ್ದರು. ತೀರ ಮರ್ಯಾದೆ ಹೋಗುವ ಹಂತದಲ್ಲಿ ಊರು ಬಿಟ್ಟು ತಮ್ಮ ಪತ್ನಿ ಮತ್ತು ಹನ್ನೊಂದು ಮಕ್ಕಳ ಸಮೇತ ನ್ಯೂಯಾರ್ಕ್ ಬಳಿಯ ಬ್ಲೂಮ್‌ಫೀಲ್ಡ್ ಎಂಬಲ್ಲಿ ಬಂದು ನೆಲೆಸಿದರು.

ನ್ಯೂಯಾರ್ಕಿನಲ್ಲಿ ಅದೇ ತಾನೆ ಹೆಣ್ಣುಮಕ್ಕಳಿಗೂ ಶಿಕ್ಷಣ ಕೊಡಬೇಕೆಂಬ ಕ್ರಾಂತಿ ಆರಂಭವಾಗಿತ್ತು. ಮಹಿಳೆಯರೇ ನಡೆಸುತ್ತಿದ್ದ ‘ದಿ ಟ್ರಾಯ್ ಫೀಮೇಲ್ ಸೆಮಿನರಿ’ ಎಂಬ ಧಾರ್ಮಿಕ ಶಾಲೆಯಲ್ಲಿ ಪುಟ್ಟ ಹುಡುಗಿ ಯೂನಿಸ್ ಪ್ರವೇಶ ಪಡೆದರು. ಅಲ್ಲೇ ಪಕ್ಕದಲ್ಲಿ ವಿಜ್ಞಾನದ ಪಾಠ ಹೇಳುವ ಅಮೆರಿಕದ ಮೊಟ್ಟ ಮೊದಲ ಪಾಲಿಟೆಕ್ನಿಕ್ ಸಂಸ್ಥೆ ಇತ್ತು. ಈ ಶಾಲೆಯ ಹುಡುಗಿಯರು ಅಲ್ಲಿಗೂ ಹೋಗಿ ಪ್ರಯೋಗಶಾಲೆಗಳಲ್ಲಿ ವಿಜ್ಞಾನದ ಪ್ರಾತ್ಯಕ್ಷಿಕೆಗಳನ್ನು ನಡೆಸುವ ಅವಕಾಶವನ್ನೂ ಅದೇ ತಾನೆ ಕಲ್ಪಿಸಲಾಗಿತ್ತು. ಹೈಸ್ಕೂಲ್ ಮೆಟ್ಟಿಲೇರಿದ ಯೂನಿಸ್ ವಿಜ್ಞಾನದ ವಿವಿಧ ವಿಷಯಗಳ ಪ್ರಯೋಗ ನಡೆಸುವುದನ್ನೂ ಕಲಿತರು. ಅವರ ಓರಗೆಯ ಹುಡುಗಿಯರೆಲ್ಲ ಗೃಹವಿಜ್ಞಾನದಲ್ಲಿ ಆಸಕ್ತಿ ತೋರಿದರೆ, ಇವರಿಗೆ ಮಾತ್ರ ರಸಾಯನ ಮತ್ತು ಭೌತವಿಜ್ಞಾನದ ಕಡೆ ಹೆಚ್ಚಿನ ಒಲವಿತ್ತು. ಜೊತೆಗೆ ಪಾಲಿಟೆಕ್ನಿಕ್‌ನಲ್ಲಿ ಯಂತ್ರೋಪಕರಣಗಳ ಜೊತೆ ಕೆಲಸ ಮಾಡುವ ಅವಕಾಶವೂ ಸಿಕ್ಕಿತು.

ಈ ಹಂತದಲ್ಲಿ ಮೈತುಂಬ ಸಾಲ ಮಾಡಿಕೊಂಡಿದ್ದ ಅಪ್ಪ ತೀರಿಕೊಂಡರು. ಸಾಲಗಾರರ ಕಾಟ ನಿಭಾಯಿಸಲೆಂದು ಯೂನಿಸ್ ಅವರ ಅಕ್ಕ ತಮಗೆ ಪರಿಚಯವಿದ್ದ ಯುವ ವಕೀಲರೊಬ್ಬರ ಸಹಾಯ ಕೋರಿದರು. ಅವರ ಹೆಸರು ಎಲಿಶಾ ಫೂಟ್